ಲಿಪ್‌ಸ್ಟಿಕ್. ಕಿವಿಗಳಿಗೆ ರಿಂಗುಗಳು...

ಸರಿತಾ ನನ್ನನ್ನು ನೋಡಿ ಎದ್ದಳು, ಅವಳ ನಡಿಗೆಯಲ್ಲಿ ಬದಲಾವಣೆಯಿತ್ತು.

ನಾನು ಅವಳನ್ನು ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದೆ; ಇದನ್ನು ಗಮನಿಸಿದ ಅವಳು ಬೆಡಗು ಬಿನ್ನಾಣದಿಂದ ನನ್ನ ಬಳಿಗೆ ಬಂದಳು, "ಉದಯ್, ಏನು ನೋಡುತ್ತಿದ್ದೀಯ? ಬಾಯ್ಸ್ ಹಾಸ್ಟಲ್‌ಗೆ ರಾತ್ರಿ ವೇಳೆ ಬರುತ್ತಿದ್ದ ಅದೇ ಹಳೆಯ ಸರಿತಾ ಎಂದು ನಿನಗೆ ಅನ್ನಿಸುತ್ತಿಲ್ಲವೇ?"

ನಂತರ ಅವಳು ಕಣ್ಣು ಹೊಡೆಯಲು ಪ್ರಯತ್ನಿಸಿದಳು.

ನನ್ನ ಧ್ವನಿ ಸಿಕ್ಕಿ ಹಾಕಿಕೊಂಡಂತೆ ಭಾಸವಾಯಿತು, "ಅವತ್ತು ನೀನು ತಪ್ಪಾಗಿ ತಿಳಿದೆ, ಮತ್ತೆ..."

"ಅದನ್ನೆಲ್ಲಾ ಲಾಲಾನ ಎದುರು ಹೇಳುವಂಥ ಮಾತುಗಳಾಗಿದ್ದವೇ? ಮಗಳು ಅಳಿಯನೆದುರು ಹೇಳಿದ್ದರೆ... ಸರಿ, ಅದೆಲ್ಲಾ ಹೋಗಲಿ ಬಿಡು. ನಾನೀಗ ಹೇಗೆ ಕಾಣಿಸುತ್ತಿದ್ದೀನಿ, ಹೇಳು?" ಹೀಗೆಂದು ಅವಳು ಸಮೀಪಕ್ಕೆ ಬಂದಳು, "ಏನಾದರೂ ಮಾತನಾಡು, ನಿನ್ನೆಯಷ್ಟೇ ನನ್ನ ತಲೆಕೂದಲುಗಳನ್ನು ಸೆಟ್ ಮಾಡಿಸಿಕೊಳ್ಳಲು ತುಂಬಾ ಟೈಮ್ ತಗೊಂಡಿದ್ದೇನೆ. ನನ್ನ ಈ ರೂಪಕ್ಕೇ ನೀವೆಲ್ಲಾ ಹುಡುಗರು ಜೀವ ಕೊಡುತ್ತಿದ್ದರಲ್ಲ!"

ನಾನು ಎರಡು ಹೆಜ್ಜೆ ಹಿಂದಕ್ಕೆ ಸರಿದೆ. ಸರಿತಾ ನಗುತ್ತಾ ನನ್ನ ಸಮೀಪಕ್ಕೆ ಬಂದಳು, "ಏನಾಯ್ತು? ಯಾಕಿಷ್ಟೊಂದು ಹೆದರ್ತಿದ್ದೀಯ? ತುಂಬಾ ದಿನಗಳ ನಂತರ ಲೇಡಿಯೊಬ್ಬಳನ್ನು ಇಷ್ಟು ಸಮೀಪದಲ್ಲಿ ನೋಡುತ್ತಿದ್ದೀಯ, ತಾನೇ? ನಿನ್ನ ಹೆಂಡತಿ ಸತ್ತು ತುಂಬಾ ವರ್ಷಗಳಾದವು ಎಂದು ಲಾಲಾ ಹೇಳಿದ."

ನಾನು ನಿಜವಾಗಿಯೂ ಹೆದರಿದೆ. ಈ ವಯ್ಯಾರಿ ಬಯಸುವುದಾದರೂ ಏನನ್ನು? ಜೀತರಾಮ ಮನೆಯಲ್ಲಿಲ್ಲವೆಂಬುದು ನನಗೆ ತಿಳಿದಿತ್ತು, ಆದರೂ ನಾನು ಗಟ್ಟಿಯಾಗಿ ಆದೇಶಿಸಿದೆ, "ಜೀತ್, ಚಹಾ... ಪಹಾ ತಗೊಂಡು ಬಾ."

"ಫಾರ್ಮಾಲಿಟೀಸ್ ಬೇಡ. ಅದೆಲ್ಲಾ ಇದ್ದಿದ್ದೇ. ಹಾಂ, ಇವತ್ತು ನನಗೆ ಚಹಾ ಕುಡಿ ಅಂತ ಹೇಳ್ಬೇಡ."

ಈ ವೇಷದ ಸರಿತಾಳಿಗಿಂತ ಆ ದೇವಿ ವೇಷದ ತಂಗಿ ಎಷ್ಟೋ ಮೇಲಾಗಿದ್ದಳು. ಕಡೇ ಪಕ್ಷ ಅವಳ ಮಾತುಗಳು ಮತ್ತು ಸಿಟ್ಟು ಅರ್ಥವಾಗುತ್ತಿತ್ತು.

ಸರಿತಾ ಆರಾಮಾಗಿ ಬಂದು ಸೋಫಾದಲ್ಲಿ ಧೊಪ್ಪನೆ ಕೂತಳು, "ಹೀಗೆ ಕೂತು ಹರಟಿ ಎಷ್ಟೋ ವರ್ಷಗಳಾದವಲ್ಲ? ನಾನು ನನ್ನ ಬಗ್ಗೆಯೇ ಹೇಳುತ್ತಿದ್ದೇನೆ. ನೀನೂ ಹೇಳು. ಎರಡನೆ ಬಾರಿಗೆ ಮದುವೆ ಯಾಕೆ ಮಾಡಿಕೊಳ್ಳಲಿಲ್ಲ? ಯಾರಾದರೂ ಗರ್ಲ್ ಫ್ರೆಂಡ್?..."

ನಾನು ಅವಳೆದುರು ಕುರ್ಚಿಯೊಂದನ್ನು ಅಡ್ಡವಿಟ್ಟು ಕೂತೆ. ಅವಳನ್ನು ಹೇಗೆ ಸಂಭಾಳಿಸಬೇಕೆಂದು ಅರ್ಥವಾಗುತ್ತಿರಲಿಲ್ಲ. ಮನೆಯಿಂದ ಹೊರ ಹೋಗಲು ಹೇಳುವುದೇ? ಜೀತರಾಮನನ್ನು ಪೇಟೆಗೆ ಸಾಮಾನುಗಳನ್ನು ತರಲು ಕಳುಹಿಸಿದ್ದಕ್ಕೆ ದುಃಖವಾಗುತ್ತಿತ್ತು.

ಸರಿತಾ ಇಲ್ಲಿಗೆ ಏನೆಂದು ಯೋಚಿಸಿ ಬಂದಿದ್ದಾಳೆ?

"ನಿನಗೆ ನೆನಪಿದೆಯಾ ಉದಯ್, ನೀನಾಗ ಥರ್ಡ್ ಇಯರ್‌ನಲ್ಲಿದ್ದೆ. ಕಾಲೇಜಿನ ಡ್ರಾಮಾ ಕಾಂಪಿಟೇಶನ್‌ಗೆ ನೀನು ಚಂಡೀಗಢಕ್ಕೆ ಹೋಗಿದ್ದೆ... ನಾಟಕದ ಒಂದು ಸೀನಿನಲ್ಲಿ ನಾನು ಕೋಟು ಹಾಕಿಕೊಳ್ಳಬೇಕಿತ್ತು. ನೀವೆಲ್ಲಾ ಹುಡುಗರು ಸೇರಿಕೊಂಡು ನಿಮ್ಮ ಪಾಕೇಟ್ ಮನಿಯಿಂದ ಸೆಕ್ಟರ್ 17ರ ಮಾರ್ಕೆಟ್‌ನಿಂದ ನನಗಾಗಿ ಗೋಲ್ಡನ್ ಕೋಟ್ ಖರೀದಿಸಿದ್ದೀರಿ. ಇಂದಿಗೂ ಆ ಕೋಟು ನನ್ನ ಬಳಿಯಿದೆ."